ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸ್ಪೆಷಲ್ ಕೇಸ್ ನಂಬರ್ : 28/2010**

**ಫ್ರಾಸಾ- 37 ಚಾಸಾ- 45**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಆರ್ ಒ ಸುದರ್ಶನ್ |
| ತಂದೆಯ ಹೆಸರುಃ | : | ಆರ್ ಒ ರಾಮಾಚಾರ್ |
| ವಯಸ್ಸುಃ | : | 67 ವರ್ಷ |
| ಉದ್ಯೋಗಃ | : | ನಿವೃತ್ತ ಹಿರಿಯ ವ್ಯವಸ್ಥಾಪಕರು |
| ವಾಸ | : | ಶಿವಮೊಗ್ಗ |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 30-08-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು 2008 ರಿಂದ 2010ರವರೆಗೆ ನಾನು ಶಿವಮೊಗ್ಗದ ಕಾರ್ಪೊರೇಷನ್ ಶಾಖೆಯಲ್ಲಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2.ಫೆಬ್ರವರಿ ಒಂದನೇ ತಾರೀಖು 2010ರಲ್ಲಿ ಸಿಐಡಿ ಎನ್ ಡಿ ಸಿ ಬೆಂಗಳೂರು ಇದರ ಪೊಲೀಸ್ ಉಪಾಧೀಕ್ಷಕರು ನಮ್ಮ ಕಾರ್ಪೊರೇಷನ್ ಬ್ಯಾಂಕಿನಲ್ಲಿ ಶಿವಮೊಗ್ಗದ ರಾಜು ಏಜೆನ್ಸಿಯವರು ಹೊಂದಿರುವ ಬ್ಯಾಂಕ್ ಖಾತೆಗೆ ಬಂದಿರುವ 7 ಡಿಡಿ ಗಳ ಯಥಾಪ್ರತಿ ನೀಡುವಂತೆ ಕೋರಿದ್ದರು. ಅದರಂತೆ ನಾನು ಬ್ಯಾಂಕಿನಲ್ಲಿ ಲಭ್ಯವಿದ್ದ ದಾಖಲೆಗಳನ್ನು ಪರಿಶೀಲಿಸಿದಾಗ ಆ 7 ಡಿಡಿ ಗಳಲ್ಲಿ 6 ಡಿಡಿಗಳನ್ನು ವಿಜಯಾ ಬ್ಯಾಂಕ್ ಶಿವಮೊಗ್ಗ ಶಾಖೆ ಹಾಗೂ ಒಂದು ಡಿಡಿಯನ್ನು ಐಎನ್ ಜಿ ವೈಶ್ಯ ಬ್ಯಾಂಕ್ ಶಿವಮೊಗ್ಗ ಶಾಖೆಯವರು ಕ್ಲಿಯರೆನ್ಸ್ ಗೆ ಕಳುಹಿಸಿರುವುದು ಕಂಡುಬಂತು. ಆ ಎಲ್ಲಾ ಡಿಡಿಗಳ ಯಥಾಪ್ರತಿಯನ್ನು ನಾನು ದಿನಾಂಕ 8-2-

2010 ರಂದು ನೀಡಿರುತ್ತೇನೆ. ಆ ಪತ್ರ ಮತ್ತು ಡಿಡಿಗಳ ಯಥಾಪ್ರತಿಯನ್ನು ನೋಡುತ್ತಿದ್ದು ಪತ್ರವನ್ನು ನಿಪಿ-74 ಎಂದು ಅದರಲ್ಲಿರುವ ಸಾಕ್ಷಿಯ ರುಜುವನ್ನುನಿಪಿ-74(ಎ) ಎಂದು ಸಾಕ್ಷಿ ಗುರುತಿಸಿದ 7 ಡಿಡಿಗಳ ಯಥಾಪ್ರತಿಯನ್ನು ಒಟ್ಟಾಗಿ ನಿಪಿ-75 ಎಂದು ಗುರುತಿಸಲಾಯಿತು. ದಾಖಲೆಗಳ ಪ್ರಕಾರ ಆ ಡಿಡಿಗಳನ್ನು ಶಶಿಧರ್ ಎಂಬುವವರು ಸಕಲೇಶಪುರ ಕಾರ್ಪೊರೇಷನ್ ಬ್ಯಾಂಕ್ ನಿಂದ ಖರೀದಿಸಿರುತ್ತಾರೆಂದು ಕಂಡುಬರುತ್ತದೆ.

**ಪಾಟೀಸವಾಲುಃ 1ನೇ ಆರೋಪಿ ಪರ** ಶ್ರೀ ಎ ಹೆಚ್ ಬಿ **ವಕೀಲರಿಂದಃ**

ನಿಪಿ-75 ರ ಡಿಡಿಗಳನ್ನು ಬ್ಯಾಂಕ್ ಖಾತೆ ಮೂಲಕ ಅಥವಾ ನಗದು ಮೂಲಕ ಖರೀದಿ ಮಾಡಿದ್ದಾರೋ ಎಂದು ನನಗೆ ಹೇಳಲಾಗುವುದಿಲ್ಲ.

**ಪಾಟೀಸವಾಲುಃ 2ನೇ ಆರೋಪಿ ಪರ** ಶ್ರೀ ಜೆ ಎಸ್ **ವಕೀಲರಿಂದಃ**

(ಮೇಲಿನ ಪಾಟೀಸವಾಲನ್ನು ಅಳವಡಿಸಿಕೊಳ್ಳುವುದಾಗಿ ಹೇಳುತ್ತಾರೆ, ಅನುಮತಿಸಿದೆ).

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**